ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ಸಂಸ್ಥೆಯ ಕಾರ್ಯಕರ್ತರ ಪುನಶ್ಚೇತನ ಸಮಾಗಮ
# 19 – 21 ಏಪ್ರಿಲ್ 2017 ದಿನನಿತ್ಯದ ವರದಿ

ದಿನಾಂಕ 19.04.2017 ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರು ಮತ್ತು ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರ ಉಪಸ್ಥಿತಿಯಲ್ಲಿ ಸಂಸ್ಥೆಯ ಕಾರ್ಯಕರ್ತರು ಹಾಗೂ ಶುಶ್ರೂಷಕರುಗಳ ಪುನಶ್ಚೇತನ ಸಮಾಗಮದ ಉದ್ಘಾಟನೆಯನ್ನು ನೆರವೇರಿಸಿದ ಜೆಎಸ್‌ಎಸ್ ಮಹಾವಿದ್ಯಾಪಿಠದ ಪ್ರಕಟಣಾ ವಿಭಾಗದ ನಿರ್ದೇಶಕರಾದ **ಪ್ರೊ. ಮೊರಬದ ಮಲ್ಲಿಕಾರ್ಜುನ** ಅವರು 'ಭಾರತೀಯ ಸಂಸ್ಕೃತಿ' ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು.

ಶ್ರೀಯುತರು 'ಪುನಶ್ಚೇತನ ಶಿಬಿರ' ಎಂಬ ಬದಲಾಗಿ 'ಪುನಶ್ಚೇತನ ಸಮಾಗಮ' ಎಂದು ಹೊಸ ಆಯಾಮ ನೀಡಿರುವುದನ್ನು ಶ್ಲಾಘಿಸಿದರು. ಭಾರತೀಯ ಸಂಸ್ಕೃತಿಯು ಸಾವಿರಾರು ವರ್ಷಗಳ ಇತಿಹಾಸವುಳ್ಳದ್ದಾಗಿದ್ದು ಇದರ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ತಿಳಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ರಾಮಾಯಣ ಮತ್ತು ಮಹಾಭಾರತದ ಉದಾಹರಣೆಗಳನ್ನು ನೀಡುತ್ತಾ ಅಹಂಕಾರ ಮತ್ತು ಸಿಟ್ಟನ್ನು ಬಿಡಬೇಕು ಎಂದು ತಿಳಿಸುತ್ತಾ ರಾಮಾಯಣದ ರಾವಣ – ಸೀತೆಯ ಪ್ರಸಂಗವನ್ನು ವಿವರಿಸಿ ಎಲ್ಲರು ಒಟ್ಟಾಗಿ ಸೇರಿ ಕೆಲಸ ಮಾಡಬೇಕು ಎಂದು ಭಾರತೀಯ ಸಂಸ್ಕೃತಿ ತಿಳಿಸಿದೆ ಎಂದರು.

### ಡಾ. ಕೆ. ಕಾಳಚನ್ನೇಗೌಡ
### ವಿಷಯ : ಸ್ವಚ್ಛತಾ ಅಭಿಯಾನ

- ಸ್ವಚ್ಛತಾ ಅಭಿಯಾನವು ಯಾವುದೇ ಸರ್ಕಾರದ ಅಥವಾ ಯಾವುದೇ ರಾಜಕೀಯ ಪಕ್ಷದ ಕಾರ್ಯಕ್ರಮವಾಗಿರುವುದಿಲ್ಲ ಎಂದು ಉಪನ್ಯಾಸವನ್ನು ಪ್ರಾರಂಭಿಸಿದ ಶ್ರೀಯುತರು ಈ ಬಗ್ಗೆ ಹಿಂದಿನ ಸರ್ಕಾರದಲ್ಲೂ ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ ಹಾಗೂ ನಿರ್ಮಲ್ ಭಾರತ್ ಅಭಿಯಾನ ಎಂಬ ಹೆಸರಿನಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿತ್ತು. ಆದರೆ ಇದನ್ನು 2014ರಲ್ಲಿ ಸ್ವಚ್ಛ ಭಾರತ್ ಅಭಿಯಾನ ಎಂದು ಮರುನಾಮಕರಣ ಮಾಡಿ ದೇಶದಾದ್ಯಂತ ಸ್ವಚ್ಛತಾ ಅಭಿಯಾನವನ್ನು ನಡೆಸಲು ತೀರ್ಮಾನಿಸಲಾಯಿತು ಎಂದು ತಿಳಿಸಿದ ಶ್ರೀಯುತರು ಸಾರ್ವಜನಿಕರು ದೇವರಲ್ಲಿ ಹರಕೆ ಹೊತ್ತು, ನಂಬಿಕೆ ಇಟ್ಟು, ಪವಿತ್ರ ನದಿಗಳಲ್ಲಿ ಸ್ನಾನ ಮಾಡಿ, ಉಟ್ಟ ಬಟ್ಟೆಗಳನ್ನು ನದಿಯಲ್ಲಿ ಬಿಟ್ಟು ಗಂಗೆಯನ್ನು ಅಪವಿತ್ರಗೊಳಿಸುವಂತ ಅಸಂಪ್ರದಾಯಕ ನಡವಳಿಕೆಯನ್ನು ಬಿಡಬೇಕು ಹಾಗೂ ಸ್ವಚ್ಛತಾ ಕೆಲಸವನ್ನು ಸ್ವಯಂ ಇಚ್ಛೆಯಿಂದ ಮನೆಯಿಂದಲೇ ಪ್ರಾರಂಭಿಸಬೇಕು ಎಂದು ಕಾರ್ಯಕರ್ತರ ಮನಮುಟ್ಟುವಂತೆ ಉಪನ್ಯಾಸ ನೀಡಿದರು.

## ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
### ವಿಷಯ : ಜೀವನ ಮೌಲ್ಯಗಳು

- ವಿಷಯದ ಮೇಲೆ ಉಪನ್ಯಾಸ ನೀಡಿದ ಶ್ರೀಗಳವರು ವ್ಯಾಧನೊಂದು ಮೊಲವ ತಂದೊಡೆ ಸಲುವ ಹಾಗಕ್ಕೆ ಕೊಂಬರಯ್ಯ ಎಂಬ ವಚನದ ಮೂಲಕ ಪ್ರವಚನವನ್ನು ಪ್ರಾರಂಭಿಸಿ, ಸ್ವಾಧ್ಯಾಯ, ಸಾಧನೆ, ಸಂಯಮ, ಸೇವೆ ಎಂಬುದರ ಬಗ್ಗೆ ವಿವರಿಸಿ ಮಾತನಾಡುತ್ತಾ, ಹಂಗೇರಿ ದೇಶದ ಕ್ಯಾಲರಿ ಎಂಬ ಶೂಟರ್ ಸಾಧನೆಯ ಬಗ್ಗೆ ವಿವರಿಸಿದರು. ಈತನು ಅನಿರೀಕ್ಷಿತವಾಗಿ ತನ್ನ ಬಲಗೈಯನ್ನು ಕಳೆದುಕೊಂಡರು ಸಹ ಸತತ ಪ್ರಯತ್ನಗಳನ್ನು ಮಾಡಿ ಹನ್ನೆರಡು ವರ್ಷಗಳು ಕಾದಿದ್ದು ಕೊನೆಗೆ ಒಲಂಪಿಕ್‌ನಲ್ಲಿ ಭಾಗವಹಿಸಿ ಎಡಗೈಯಿಂದ ಶೂಟ್ ಮಾಡಿ ತನ್ನ ದೇಶಕ್ಕೆ ಚಿನ್ನದ ಪದಕವನ್ನು ತಂದುಕೊಟ್ಟದನ್ನು ವಿವರಿಸಿದರು. ನಾವು ಎಲ್ಲರ ಬಗ್ಗೆ ಮಾತನಾಡುತ್ತೇವೆ ಆದರೆ, ನಮ್ಮ ಬಗ್ಗೆ ನಾವು ತಿಳಿದುಕೊಂಡಿರುವುದಿಲ್ಲ ಎಂದು ತಿಳಿಸಿದರು.
- ಇದೇ ರೀತಿ ಹಿಟ್ಲರ್ ಬಗ್ಗೆ ವಿವರಿಸುತ್ತಾ ಅವನ ಸೈನಿಕರು ಅವನ ಮಾತನ್ನು ಪಾಲಿಸುತ್ತ, ಸಾಯುವುದನ್ನು ಕಂಡು ಬೇರೆಯವರು ನೀವೇಕೆ ಈ ರೀತಿ ಅವರ ಆಜ್ಞೆಯನ್ನು ಪಾಲಿಸುತ್ತೀರೆಂದು ಕೇಳಿದಾಗ ಇಂತಹ ರಾಜನ ಕೈಯಲ್ಲಿ ಇರುವುದಕ್ಕಿಂತ ಸಾಯುವುದೆ ಮೇಲೆಂದು ತೀರ್ಮಾನಿಸಿರುವುದಾಗಿ ಹೇಳುತ್ತಾರೆ. ಈ ಪ್ರಸಂಗಗಳನ್ನು ಉದಾಹರಣೆಯಾಗಿ ನೀಡಿ ಕಾರ್ಯಕರ್ತರೊಡನೆ ಸಂವಾದ ನಡೆಸಿ ಉತ್ತಮ ಪ್ರವಚನವನ್ನು ನೀಡಿದರು.

## ಡಾ. ಆರ್. ಬಾಲಸುಬ್ರಹ್ಮಣ್ಯಂ
### ವಿಷಯ : ನಾಯಕತ್ವದ ಹೊಣೆಗಾರಿಕೆ

- ನಾಯಕ ಎಂದರೆ ಏನು? ಎಂದು ಕಾರ್ಯಕರ್ತರನ್ನು ಪ್ರಶ್ನೆ ಕೇಳುವ ಮೂಲಕ ಉಪನ್ಯಾಸವನ್ನು ಪ್ರಾರಂಭಿಸಿದ ಶ್ರೀಯುತರು ಭವಿಷ್ಯದ ಬಗ್ಗೆ ಚಿಂತಿಸುವ ಗುಣಗಳನ್ನು ಹೊಂದಿದ್ದು ನಿರ್ದಿಷ್ಟವಾದ ವಿಷಯದ ಬಗ್ಗೆ ಚಳುವಳಿಯನ್ನು ಪ್ರಾರಂಭಿಸಿ ಅದರ ಜವಾಬ್ದಾರಿಯನ್ನು ಹೊರಲು ಮುಂದೆ ಬರುವವನೆ ನಿಜವಾದ ನಾಯಕ. ಆತನಿಗೆ ಅನುಕಂಪ, ಶ್ರದ್ಧೆ, ಸಕಾರಾತ್ಮಕ ಚಿಂತನೆ, ನಿರ್ಭಯತೆ, ನಗುಮುಖ, ಜನಾಕರ್ಷಣೆಯ ವ್ಯಕ್ತಿತ್ವ, ಪ್ರಶ್ನಿಸುವ ಗುಣ ಮತ್ತು ಸಮಯ ಪ್ರಜ್ಞೆ ಇರಬೇಕೆಂದು ತಿಳಿಸಿದರು.

## ಶ್ರೀ. ಹೆಚ್.ಜಿ ಜಗದೀಶ್
### ವಿಷಯ : ನನ್ನ ಸಂಸ್ಥೆ – ನನ್ನ ಆಸ್ತಿ

- ನನ್ನ ಸಂಸ್ಥೆ – ನನ್ನ ಆಸ್ತಿ ಎಂದರೆ ಏನು? ಎಂದು ಪ್ರಶ್ನಿಸಿದ ಶ್ರೀಯುತರು ಇದನ್ನು ಇಂಗ್ಲೀಷ್‌ನಲ್ಲಿ My Organization - My Property ಎಂದು ಹೇಳಬಾರದು ಏಕೆಂದರೆ ಇದು ನಾನು ಸಂಪಾದಿಸಿದ್ದಲ್ಲ ಆದ್ದರಿಂದ My Organization - My Asset ಎಂದು ಹೇಳಬೇಕೆಂದರು. ಉಪನ್ಯಾಸವನ್ನು ಪ್ರಾರಂಭಿಸುವ ಮೊದಲು ಉಪನ್ಯಾಸವನ್ನ ಕೇಳಲು ಬಂದಿರುವವರಾರೆಂದು ತಿಳಿದು ಉಪನ್ಯಾಸವನ್ನು ಪ್ರಾರಂಭಿಸಬೇಕು. ಏಕೆಂದರೆ ಒಬ್ಬ ನಿವೃತ್ತ ಡಾಕ್ಟರ್ ಶಾಲಾ ಮಕ್ಕಳಿಗೆ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಕುಟುಂಬ ಯೋಜನೆಯ ಬಗ್ಗೆ ಉಪನ್ಯಾಸ ನೀಡಿದ್ದು ಹಾಸ್ಯಾಸ್ಪದವೆಂದು ಉದಾಹರಣೆ ನೀಡಿದರು. ಸಂಸ್ಥೆಯ ಆಸ್ತಿಯು ಯಾವ ರೀತಿ ದುರುಪಯೋಗವಾಗುತ್ತದೆಂಬ ಬಗ್ಗೆ ಒಂದು ಉದಾಹರಣೆ ನೀಡಿದರು. ಒಂದು ಮನೆಯಲ್ಲಿ ಮಗುವೊಂದು ಪಕ್ಕದ ಮನೆಯ ಹುಡುಗನ ಪೆನ್ಸಿಲ್ ಕದ್ದು ಬಂದದಕ್ಕೆ ಅವನ ತಾಯಿ ಅವನನ್ನು ಹೊಡೆಯುತ್ತಿದ್ದಾಗ ಮನೆಗೆ ಬಂದ ತಂದೆ ವಿಷಯವನ್ನು ತಿಳಿದು ಮಗನನ್ನು ಕುರಿತು ನೀನೇಕೆ ಅಲ್ಲಿ ಕದಿಯಲು ಹೋದೆ ನನಗೆ ಹೇಳಿದ್ದರೆ ನಾನೇ ಕಛೇರಿಯಿಂದಲೇ ಒಂದು ಬಾಕ್ಸ್ ಪೆನ್ಸಿಲ್

ತಂದುಕೊಡುತ್ತಿದ್ದೆ ಎಂದು ಹೇಳುವ ಪ್ರಸಂಗವನ್ನು ಮನ ಮುಟ್ಟುವಂತೆ ವಿವರಿಸುತ್ತಾ ತಾವ್ಯಾರು ಈ ರೀತಿ ಆಗದೆ ನೀವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಪ್ರತಿಯೊಂದು ವಸ್ತುವನ್ನು ರಕ್ಷಿಸಬೇಕಾದದ್ದು ಮತ್ತು ದುರುಪಯೋಗ ಮಾಡಿಕೊಳ್ಳದೆ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು. ಉಪನ್ಯಾಸದ ನಡುವೆ ಎಲ್ಲಾ ಕಾರ್ಯಕರ್ತರಿಗೂ ಒಂದು ಪ್ರಶ್ನೆಪತ್ರಿಕೆಯನ್ನು ನೀಡಿ ಇದನ್ನು ಓದಿ ಅತಿ ಬೇಗ ಯಾರು ಉತ್ತರಿಸುತ್ತೀರೆಂದು ಕೇಳಿ ಕಾರ್ಯಕರ್ತರನ್ನು ಬೇಸ್ತು ಬೀಳಿಸಿದರು. ಇದರಿಂದಾಗಿ ಕಛೇರಿಯಲ್ಲಿ ಕೆಲಸ ಮಾಡುವ ಮೊದಲು ಸಂಬಂಧಿಸಿದ ಪತ್ರವನ್ನು ಓದಿ ತಿಳಿದು ನಂತರ ಅದಕ್ಕೆ ಉತ್ತರಿಸುವ ಪ್ರಯತ್ನ ಮಾಡಬೇಕೆಂದು ಮನದಟ್ಟು ಮಾಡಿದ್ದು, ಸಮಾಗಮದ ಕಾರ್ಯಕರ್ತರಿಗೆ ತುಂಬ ಮೆಚ್ಚುಗೆಯಾಯಿತು.

## ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು

- ಪೂಜ್ಯ ಶ್ರೀಗಳವರು ಮನುಷ್ಯನು ಭೂಮಿ, ಅಧಿಕಾರ, ಕೀರ್ತಿ, ಹಣ ಹಾಗೂ ಪ್ರಶಸ್ತಿಗಳಿಗಾಗಿ ಹೋರಾಟ ಮಾಡಿ ಸತ್ತವರು ಕೋಟಿ ಕೋಟಿ ಆದರೆ ನಿನಗಾಗಿ ಸತ್ತವರ ಒಬ್ಬರನ್ನು ಕಾಣೇ ಗುಹೇಶ್ವರ ಎಂಬ ವಚನದ ಮೂಲಕ ಪ್ರವಚನವನ್ನು ಪ್ರಾರಂಭಿಸಿ, ಅಲ್ಲಮ ಪ್ರಭುಗಳ ಊರ ಮಧ್ಯದ ಕಣ್ಣ ಕಾಡಿನಲ್ಲಿ ಐದು ಹೆಣ ಬಿದ್ದಾವೆ ಬಂದವರು ಬಂದವರು ಅಳುತ್ತಾರೆ ಎಂಬ ವಚನವನ್ನು ಉದಾಹರಣೆಯಾಗಿ ನೀಡಿದರು. ಮಹಾಭಾರತ ನಡೆದದ್ದು ಭೂಮಿಗಾಗಿ. ಆದರೆ ರಾಮಾಯಾಣ ನಡೆದದ್ದು ಏತಕ್ಕಾಗಿ ಎಂದು ಪ್ರಶ್ನಿಸಿದರು. ನಾವಿರುವ ತನಕ ನಾವು ಏನೆ ಸಂಪಾದನೆ ಮಾಡಿದರು ನಮ್ಮ ಜೊತೆ ತೆಗೆದುಕೊಂಡು ಹೋಗಲು ಬರುವುದಿಲ್ಲ ಆದುದರಿಂದ ಸರಳ ಜೀವನವನ್ನು ನಡೆಸುವುದನ್ನು ಕಲಿಯಬೇಕು ಏಕೆಂದರೆ ಇಲ್ಲಿ ನಮ್ಮದೆನ್ನುವುದು ಏನೂ ಇಲ್ಲ ಎಲ್ಲವು ಪ್ರಕೃತಿಯ ಸೃಷ್ಟಿ ಎಂಬ ಸತ್ಯವನ್ನು ಅರಿಯಬೇಕೆಂದು ಬೋಧಿಸಿದರು. ಸಭಿಕರ ಪ್ರಶ್ನೆಗಳಿಗೆ ಉತ್ತರಿಸುತ್ತ ಅಲ್ಪ ಸುಖದ ಆಸೆಗಾಗಿ ದುಶ್ಚಟಕ್ಕೆ ಬಲಿಯಾದವರಿಗೆ ತಿಳಿಯ ಹೇಳಬಹುದು ಆದರೆ ಆಜ್ಞೆ ಮಾಡಲು ಬರುವುದಿಲ್ಲವೆಂದು ಹಾಗೂ ನಮ್ಮ ದಾರಿಯಲ್ಲಿ ನಾವು ನಡೆದರೆ ಏನೂ ಆಗುವುದಿಲ್ಲ ಆ ಕಡೆ ಈ ಕಡೆ ನೋಡಿದರೆ ಮಾತ್ರ ಸಮಸ್ಯೆ ಆಗುವುದೆಂದು ತಿಳಿಸಿದರು.

## ಪ್ರೊ. ಟಿ.ಎನ್. ಪ್ರಭಾಕರ್

### ವಿಷಯ : ಸರಳ ಜೀವನ

- ಶ್ರೀಯುತರು ಮೌಲ್ಯಗಳ ಸಂರಕ್ಷಣೆಗಾಗಿ ವಿದ್ಯಾರ್ಥಿಗಳ ಒಳಿತಿಗಾಗಿ ಸಮಾಜದ ಅನೂಕೂಲಕ್ಕಾಗಿ ಈ ರೀತಿ ಸಮಾಗಮಗಳನ್ನು ಜೆಎಸ್‌ಎಸ್ ಸಂಸ್ಥೆಯು ನಡೆಸುತ್ತಿರುವುದು ಈ ಸಂಸ್ಥೆಯ ವಿಶೇಷವೆಂದು ಶ್ಲಾಘಿಸಿದರು. ಸರಳ ಜೀವನ – ಉದಾತ್ತ ಚಿಂತನೆ ಎಂದು ಮಾತನಾಡಿದ ಶ್ರೀಯುತರು ಒಳ್ಳೆಯ ವಿಚಾರಗಳನ್ನು ನಿರ್ದಿಷ್ಟವಾದ ವ್ಯಕ್ತಿಗಳಿಂದಲೆ ತಿಳಿದುಕೊಳ್ಳಬೇಕೆಂದು ಏನೂ ಇಲ್ಲ ಅದು ಎಲ್ಲಿಂದಲ್ಲಾದರೂ ಬರಲಿ ಅದನ್ನು ಸ್ವೀಕರಿಸಬೇಕೆಂದು ತಿಳಿಸಿದರು. ಋಷಿ ಮುನಿಗಳ ಸಂಪತ್ತು ಅವರ ಜ್ಞಾನವೇ ಹೊರತು ಬೇರೇನೂ ಅಲ್ಲ. ತಾಯಿಯನ್ನು ದೇವರಂತೆ ಕಾಣಬೇಕು ಎಂದು ತಿಳಿಸುತ್ತಾ ಭಾರತ ಮತ್ತು ಇಂಡಿಯಾ ಎಂಬ ಹೆಸರಿಗೆ ಇರುವ ಬೇರೆ ಬೇರೆ ಅರ್ಥವನ್ನು ವಿವರಿಸಿದರು. ಭಾರತ ಎಂದರೆ ಶ್ರೇಷ್ಠವಾದ ಹೆಸರು. ಇಂಡಿಯಾ ಎಂದರೆ ಉಚ್ಚಾರಣೆ ಬಾರದ ಇಂಗ್ಲೀಷರು ಪರಕೀಯರು ಎಂದು ಹೇಳಲು ಇಂಡಿಯಾ ಎಂದು ಕರೆದರು. ಧರ್ಮ–ಅರ್ಥ–ಕಾಮ–ಮೋಕ್ಷ ಇದು ನಮ್ಮ ಗುರಿ. ಚಾಣಕ್ಯನು ಸರಳ ಜೀವನಕ್ಕೆ ಒಂದು ಮಾದರಿಯಾಗಿದ್ದವನು ಎಂದ ಅವನು ಸರಳ ಜೀವನ ನಡೆಸುವವರನ್ನು ಒಪ್ಪಿಕೊಳ್ಳುವುದು ಒಂದು ಲಕ್ಷಣ ಎಂದು ತಿಳಿಸಿದರು. ಪರಸ್ತ್ರೀಯನ್ನು ಕಂಡ ಕೂಡಲೆ ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುವವನೆ ನಿಜವಾದ ಸುಶಿಕ್ಷಿತ ಮನುಷ್ಯನೆ ಹೊರತು, ಶೂಟು, ಬೂಟು ಧರಿಸಿ ಗಳಗಳನೆ ಮಾತನಾಡುವವನು ಸುಶಿಕ್ಷಿತ ಮನುಷ್ಯನಲ್ಲ ಎಂದು ವಿವರಿಸಿದರು.

**ಪ್ರೊ. ಜಿ.ಎಸ್. ಜಯದೇವ್**

**ಕಾಯಕ ಶ್ರದ್ಧೆ**

- ವಿಷಯದ ಬಗ್ಗೆ ಮಾತನಾಡಿದ ಶ್ರೀಯುತರು ಎಲ್ಲಿ ಆಧ್ಯಾತ್ಮಿಕತೆ ಇರುವುದೋ ಅಲ್ಲಿ ಕಾಯಕ ಸಫಲವಾಗುವುದು. ಮನುಷ್ಯನು ವಿವೇಚನೆಯನ್ನು ಬಳಸಿ ಕೆಲಸ ಮಾಡಿದರೆ ಮೂಲ ಉದ್ದೇಶ ಸಫಲವಾಗಿ ಸ್ವಚ್ಛ ಸಮಾಜ ಮಾಡಬಹುದು. ಶ್ರದ್ಧೆಯಿಂದ ಕೆಲಸ ಮಾಡಿದರೆ ಘನತೆ ಹೆಚ್ಚುತ್ತದೆ. ದೈಹಿಕ ಶ್ರಮದಲ್ಲಿ ನಂಬಿಕೆ ಇಟ್ಟು ಸಂತೋಷವಾಗಿ ಕಾಯವನ್ನು ಬಳಸಿ ಮಾಡುವ ಕ್ರಮವೇ ಕಾಯಕ. ದೈಹಿಕ ಶ್ರಮವನ್ನು ಬಿಟ್ಟು ಯಂತ್ರಗಳ ಬಳಕೆಯಿಂದ ಕೆಲಸ ಮಾಡುವುದು ಸರಿಯಲ್ಲ. ಶರಣನಾಗುವ ಮೂಲಕ ಕೈಗೊಂಡ ಕಾಯಕದಿಂದ ಘನತೆ ಗಾಂಭೀರ್ಯ ಹೆಚ್ಚುತ್ತದೆ ಎಂದು ತಿಳಿಸಿದರು.